ಮರೆತುಹೋಗುವಷ್ಟು. ಆದ್ರೆ ಮಾಡ್ತಿದ್ದಾರಲ್ಲ ಅವ್ರು. ಹೀ ಈಸ್ ಎಂಗೇಜಿಂಗ್ ಹಿಮ್‌ಸೆಲ್ಫ್. ಅದಕ್ಕೊಂದು ಬೆಲೆ ಇದ್ದೇ ಇದೆ. ಅನೇಕ ಮಹತ್ವದ ಅನುವಾದಗಳನ್ನು ಮಾಡಿದ್ದಾರೆ. ಪ್ರಾಚೀನ ಸಾಹಿತ್ಯ, ಆಧುನಿಕ ಲೇಖಕರು, ಹೊಸ ತಲೆಮಾರಿನವರು ಎಲ್ಲರ ಬಗ್ಗೆಯೂ ಸ್ವಾಮಿ ಬರೆದಿದ್ದಾರೆ ಮತ್ತು ಮಾತಾಡಿದ್ದಾರೆ. ಆದ್ರೆ ಅವರು ಯಾವ ವಿಮರ್ಶಾ ಕೃತಿಯನ್ನೂ ತರಲಿಲ್ಲ. ಅದು ಅವರಿಷ್ಟ. ಆದ್ರೆ ಮಾತಾಡಿದ್ದಾರೆ, ಬರೆದಿದ್ದಾರೆ. ಎಲ್ಲೋ ಒಂದು ಕಡೆ ಪ್ರಾಮಿಸಿಂಗ್ ಅಂತ ಅನ್ನಿಸಿದ್ರೆ ಹೇಳ್ಕೊಂಡು ಓಡಾಡಿದ್ದಾರೆ. ಬೇರೆಯವರಿಗೆ ಏನನ್ನಿಸುತ್ತೊ ಬಿಡುತ್ತೊ ಗೊತ್ತಿಲ್ಲ. ಆದ್ರೆ ರಹಮತ್‌ಗಾಗಲಿ, ಸ್ವಾಮಿಗಾಗಲಿ, ನನಗಾಗಲಿ ಇವೆಲ್ಲಾ ಕ್ರಿಯೆಗಳು ನಮ್ಮ ಒಳಜಗತ್ತಿಗೂ ಇಷ್ಟವಾಗುವ ಕೆಲಸಗಳು.

◆ **ನಿಮ್ಮ ದೃಷ್ಟಿಯಲ್ಲಿ ಈಗ ಕನ್ನಡ ವಿಮರ್ಶೆಯಲ್ಲಿ ಕಂಡುಬರುತ್ತಿರುವ ಅನುಪಸ್ಥಿತಿ ಯಾವ ಬಗೆಯದು?**

ಹೊಸಬರು ವಿಮರ್ಶೆಯನ್ನು ಬರೀಬೇಕು. ಇನ್ನೂ ಓಎಲ್‌ಎನ್, ಎಚ್‌ಎಸ್‌ಆರ್, ಕೆವಿಎನ್, ರಹಮತ್, ಚೆನ್ನಿ, ಅಶೋಕ್, ನರಹಳ್ಳಿ, ಸುಮಿತ್ರಾಬಾಯಿ, ಹುಳಿಯಾರ್ ಇವರೇ ಬರೀಬೇಕು ಅಂತ ನಿರೀಕ್ಷಿಸಬಾರದು. ಅದೊಂದು ತರಹ ಹೊರೆ ಅನಿಸುತ್ತೆ. ನಾವೆಲ್ಲಾ ಎಪ್ಪತ್ತು ಅರವತ್ತು ದಾಟಿದವರು. ಕಡಿಮೆ ವಯಸ್ಸಿನವರು ಯಾರ್‍ಯಾರಿದ್ದಾರೆ ಅಂತ ನೋಡಿದರೆ ಸಂಖ್ಯೆ ಅಷ್ಟು ಆಶಾದಾಯಕವಾಗಿಲ್ಲ. ಇಲ್ಲವೇ ಇಲ್ಲ ಅಂತಲ್ಲ. ಕೆಲವರಿರಬಹುದು. ಆದರೆ ಸಾಲದು. ವಿಶ್ವವಿದ್ಯಾಲಯಗಳಲ್ಲಿ, ಕಾಲೇಜುಗಳಲ್ಲಿ ಎಷ್ಟು ಜನ ಇದ್ದಾರೆ? ತರುಣ ವಿಮರ್ಶಕರನ್ನು ವಿಶ್ವವಿದ್ಯಾಲಯಗಳು ರೂಪಿಸುತ್ತಿವೆಯೆ? ಸಂಶೋಧನಾ ಮಹಾಪ್ರಬಂಧ ಎನ್ನುವಂಥದ್ದು ಪ್ರಾರಂಭವೇ ಹೊರತು ಮುಕ್ತಾಯವಲ್ಲ. ಥೀಸಿಸ್ ಬರೆದ ಮೇಲೂ ಬರವಣಿಗೆ ಮಾಡಿದವರು ಎಷ್ಟು ಜನ ಇದ್ದಾರೆ? ಕಾವ್ಯ, ಕಥೆ, ನಾಟಕ, ಅನುವಾದ ಕ್ಷೇತ್ರಗಳಲ್ಲಿ ತೊಡಗಿಕೊಂಡಷ್ಟು ಜನ ವಿಮರ್ಶೆಯಲ್ಲಿ ತೊಡಗಿಸಿಕೊಳ್ಳುವುದಿಲ್ಲ ಯಾಕೆ?

ಕೆ.ವೈ. ನಾರಾಯಣಸ್ವಾಮಿ ನಾಟಕಗಳನ್ನ ಬರೆದ್ರು. 'ನೀರದೀವಿಗೆ' ನಿಸ್ಸಂಶಯವಾಗಿ ಒಂದು ಒಳ್ಳೆಯ ಅಧ್ಯಯನಶೀಲ ಕೃತಿ. ಆದ್ರೆ ಮುಂದೆ ಅವರು ವಿಮರ್ಶೆ ಬರೀಲಿಲ್ಲ. ಇರಲಿ, ಈ ಕೃತಿಯನ್ನು ಎಷ್ಟು ಜನ ನೆನಪಿಟ್ಟಿದ್ದಾರೆ? ಈಗ ಡಿ.ಆರ್. ನಾಗರಾಜ ಅವರದೇ 'ಸಾಹಿತ್ಯ ಕಥನ' ಇದೆಯಲ್ಲ, ಇದು ಬಹಳ ಮುಖ್ಯವಾದ ಕೃತಿ. ಅದರ ಕುರಿತು ಎಷ್ಟು ಲೇಖನಗಳು ಬಂದಿವೆ? ಕೆ.ವಿ. ನಾರಾಯಣ ಅವರ 'ತೊಂಡುಮೇವು' ಬಗ್ಗೆ ಎಷ್ಟು ಅಧ್ಯಯನಗಳಾಗಿವೆ? ಓದಿರ್‍ತಾರೆ, ಓದಿರೋದಿಲ್ಲ ಅಂತಲ್ಲ. ಬಸವರಾಜ ಕಲ್ಗುಡಿ ಅವರದು ನಿಸ್ಸಂಶಯವಾಗಿ ಕನ್ನಡದ ಒಂದು ಅತ್ಯುತ್ತಮ ಥೀಸಿಸ್ಸು. ಎಲ್ಲರೂ ಅದನ್ನು ಬಳಸಿಕೊಳ್ತಾರೆ. ಆದ್ರೆ ಅದರ ಅಧ್ಯಯನದ ಸ್ವರೂಪದ ಬಗ್ಗೆ ಚರ್ಚೆಮಾಡುವುದಿಲ್ಲ. ನಾನಂತೂ ಅದರ ಬಗ್ಗೆ ಒಂದೇ ಒಂದು ಮುಖ್ಯವಾದ ಲೇಖನ ಓದಿಲ್ಲ. ಕನ್ನಡ ವಿಮರ್ಶೆ ಬರೀ ತೋಂಡಿ ಸಂಪ್ರದಾಯದಲ್ಲೇ ಉಳಿದುಬಿಟ್ಟರೆ ಉಪಯೋಗವಿಲ್ಲ. ಈಗ ಮಹತ್ವದ ವಿಮರ್ಶೆ ಅಷ್ಟಾಗಿ ಸೃಷ್ಟಿ ಆಗ್ತಾ ಇಲ್ಲ ಅನ್ನೋದು ಒಂದಾದರೆ, ಈಗಾಗಲೇ ಬಂದಿರುವ ಮಹತ್ವದ್ದನ್ನು ಅರಿಯುವ ಪ್ರಯತ್ನಗಳು ಕೂಡ ಕಡಿಮೆ. ಸೃಜನಶೀಲ ಸಾಹಿತ್ಯವನ್ನೇ ನಾವು ಓದಿಕೊಂಡು ಇರ್‍ತೀವಿ, ವಿಮರ್ಶೆಯನ್ನು ಯಾಕೆ ಓದಬೇಕು ಅನ್ನೋ ಧೋರಣೆಯೂ ಹಲವರಲ್ಲಿದೆ. ವಿಮರ್ಶೆ ಅಂದ್ರೆ ಒಂದು ವ್ಯರ್ಥವಾದ ಪರಿಶ್ರಮ ಅನ್ನೋ ಭಾವನೆಯನ್ನ ಅನೇಕರು ಬೆಳೆಸಿಕೊಳ್ತಾ ಇದ್ದಾರೆ. ಹೊಸ ವಿಮರ್ಶಕರು ಶಠರು, ಹಟಮಾರಿಗಳು ಆಗಿಬಿಟ್ರೂ ಉಪಯೋಗವಿಲ್ಲ. ಕಿರಂ ಶಿಷ್ಯರಲ್ಲಿ ತೊಂಬತ್ತು ಪ್ರತಿಶತ ಜನ ಅವರ ವ್ಯಕ್ತಿತ್ವದ ಕುರಿತು ಮಾತಾಡ್ತಾರೆಯೇ ಹೊರತು ಅವರ ಬರವಣಿಗೆಯ ಸೂಕ್ಷ್ಮಕ್ರಮಗಳನ್ನು ಕಲಿಯಲು ಇಚ್ಛಿಸಲಿಲ್ಲ. ಅನ್‌ಫಾರ್ಚುನೇಟ್ಲಿ ಅನೇಕ ಡಿ.ಆರ್. ಶಿಷ್ಯರಿಗೂ ಇದು ಅನ್ವಯವಾಗುತ್ತೆ. ಡಿ.ಆರ್. ಎಷ್ಟೆಲ್ಲಾ ಓದಿಕೊಂಡಿದ್ರು. ಭಿನ್ನಾಭಿಪ್ರಾಯಗಳು ಏನೇ ಇರೂ ನಮ್ಮ ಕಾಲದ ದೊಡ್ಡ ಚಿಂತಕ ಅವರು. ಆದ್ರೆ ಕನ್ನಡ ವಿಮರ್ಶೆ ಇಲ್ಲಿಂದ ಮುಂದೆ ಎಲ್ಲಿಗೆ ಹೋಗಬೇಕು? ಹಾಗೆ ತೆಗೆದುಕೊಂಡು ಹೋಗುವ ಸಿದ್ಧತೆಗಳು ಕನ್ನಡದಲ್ಲಿ ನಡೆದಿವೆಯೆ? ವಾಟ್ ನೆಕ್ಸ್ಟ್? ನಾನಂತೂ ಆಶಾವಾದಿ. ನಿಮ್ಮ ಪೀಳಿಗೆಯ ಮತ್ತು ನಿಮಗಿಂತ ತುಸು ಕಿರಿಯರಾದ ಕೆಲವರು ನಮ್ಮ ತಿಳಿವಳಿಕೆಯನ್ನು ವಿಸ್ತರಿಸಿದ್ದಾರೆ. ನಿದರ್ಶನವಾಗಿ ಒಂದು ಹೆಸರು ಹೇಳುವುದಾದರೆ, ನೆಲ್ಲುಕುಂಟೆ ವೆಂಕಟೇಶ್ ಅವರು. ●